


ಬಸ್ಸಿನೊಳಗಿದ್ದಾಗೆಲ್ಲ ವನದೇವಿಯ ಒಡ್ಡೋಲಗವೆಂಬಂತೆ
ಸೆಳೆಯುವ ಗುಡ್ಡ ಬೆಟ್ಟಗಳೆಲ್ಲ ಬಸ್ಸು ತಪ್ಪಿಸಿಕೊಂಡಾಗ
ತಪ್ಪಿಯೂ ನಮ್ಮತ್ತ ನೋಡುವುದೇ ಇಲ್ಲ
ಮನೆ ಹಿಸ್ಸೆ ಮಾಡಿಕೊಂಡ ದಾಯಾದಿಗಳಂತೆ ನಿಂತಿರುತ್ತವೆ ಗಪ್‌ಚುಪ್!
ಕಪ್ಪು ಕನ್ನಡಕದ ದೊಡ್ಡ ನಿತಂಬದ ಕಾರುಗಳು
ನೋಡಿದರೆಲ್ಲಿ ಲಿಫ್ಟ್ ಕೊಡಬೇಕಾದೀತೋ ಎಂಬ ಕಳ್ಳಗತ್ತಿನಲ್ಲಿ
ಪಾಸಾಗುತ್ತವೆ. ಹಳೆ ಟೆಂಪೋಗಳೆಲ್ಲ ಪಾಪ ಲಿಕಿ ಲಿಕಿ
ಸೀಮೆ ಎಣ್ಣೆಯ ಖಾಲಿ ಚೌಕ ಟಿನ್ ಡಬ್ಬಗಳಂತೆ. ಅವೆಲ್ಲ ಇಲ್ಲೇ
ಬೇಲೆಕೇರಿಗೆ ಹೋಗುತ್ತವೆ ಅಷ್ಟೆ. ಅವುಗಳ ಉದಾಸ ಮುಖ ಮುದ್ರೆ
''ಬರಬೇಡಿ ಹಾಂ?'' ಅನ್ನುವಂತಿದೆ.

ಹಿಂದಿನ ಮತ್ತು ಮುಂದಿನ ಎಲ್ಲ ಊರುಗಳಿಂದ ಮುಕ್ತವಾದ
ಈ ಸಣ್ಣ ಅಂತರಾಳ
ಎಲ್ಲ ವೇಷಗಳನ್ನು ತ್ಯಜಿಸಲು ತಕ್ಕ ಜಾಗ
ಎರವಲು ಮಾತನ್ನು ಮೀರಲು ತಕ್ಕ ಸಮಯ
ನಸುಕಿನಲ್ಲೆದ್ದು ಬೆಟ್ಟ ಬೇಣ ಅಲೆದು ಹಸಿಗೇರು ಬೀಜ ಸುಲಿದು
ತಂದು ಎಲೆಯಲ್ಲಿ ಜೋಡಿಸಿ ಬಿಸಿಲಲ್ಲಿ ಮಾರುವ
ಅಜ್ಜಿಯ ಸೊನೆ ಸುಟ್ಟ ಹೆಬ್ಬೆರಳ ಗುರುತು
ಗಾಳಿಯ ಮೈ ಮೇಲೆ ಮೂಡುವಾಗ...
ಬಾಕಿಯವರಂತೆ ನೀನೂ ಇಂಜಿನಿಯರಿಂಗ್ ಮಾಡು
ಎಂದು ಮಗನನ್ನು ತಳ್ಳುವುದು ಸರಿಯೆ...
ತಾಲ್ಲೂಕಾಫೀಸಲ್ಲಿ ಮಾಸಾಶನದ ಅರ್ಜಿ ಫಾರ್ಮನ್ನು ತಾನೇ
ತಾಳ್ಮೆಯಿಂದ ತುಂಬಿ ಕೊಟ್ಟ ಆ ಪೋರಿ
ಯಾವ ಪೈಕಿ ಅಂತ ಮನಸಲ್ಲಿ ಪ್ರಶ್ನೆ ಮೂಡುವುದು ಸರಿಯೆ...
ತೊಡೆಯ ಮೇಲೆ ವಾಲಿ ನಿದ್ದೆ ಹೋದ ಅಪರಿಚಿತ
ಹಸುಗೂಸನ್ನು ಎಬ್ಬಿಸುವುದು ಸರಿಯೇ...
ಪ್ರಪಂಚದ ಸಕಲ ಮಕ್ಕಳೂ ಪರಿಚಿತರೇ ಅಲ್ಲವೇ...

ಹೀಗೆ ಎಲ್ಲ ತಿಳಿವಾಗಿ ಹೊಳೆದು ತಿಳಿಯಾಗಿ ಹೋಗುತಿದೆ
ಇನಿತೂ ಜೀವಕ್ಕೆ ತ್ರಾಸು ಕೊಡದೆ
ಒಂದು ಕತೆಯಿಂದ ಹೊರಬಿದ್ದ ಇನ್ನೊಂದರಲಿ
ಇನ್ನೂ ಕಾಲಿಡದ
ಗೇರು ಸೊನೆ ನೀರವದ ಬಾಳೆಗುಳಿ ಕ್ರಾಸಿನಲ್ಲಿ

